MYSORE LEGISLATIVE ASSEMBLY.

SIXTEENTH DAY.

Tuesday, 20th March 1956.

The House met in the Assembly Hall, Atara Kacheri, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Mellekav Tank, Koratagere Taluk. (Restoration).

Q.—374. Sri MUDDURAMIAH (Koratagere-Madhugiri).—

Will the Government be pleased to state:—

(*a*) whether it is a fact that the estimate for the restoration of Mallekav Tank, Koratagere Taluk, is sanctioned;

(*b*) if so, the action taken so far to restore the tank?

A.—Sri H. M. CHANNABASAPPA. (Minister of Industries).—

(*a*) No.

(*b*) No restoration is contemplated.

ಶ್ರೀ ಮುದ್ದುರಾಮಯ್ಯ.—ಈ ಮಲ್ಲೇ ಕಾವು ಕೆರೆಯ ಅಚ್ಚುಕಟ್ಟು ಎಷ್ಟೆಂಬುದನ್ನು ಹೇಳಬಲ್ಲಿರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—135 ಎಕರೆ ಗಳು.

ಶ್ರೀ ಮುದ್ದುರಾಮಯ್ಯ.—ಅಲ್ಲಿ ಈಗ 50 ಎಕರೆ ಕೂಡ ನಾಗುವಳಿ ಆಗುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲ.

ಶ್ರೀ ಮುದ್ದುರಾಮಯ್ಯ.—ಆದಷ್ಟು ಜಾಗ್ರತೆಯಾಗಿ ಈ ಕೆರೆಯನ್ನು ರಿಪೇರಿ ಮಾಡಿಸಲು ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಷಯ ಈಗ ಸರ್ಕಾರದವರ ಪರಿಶೀಲನೆಯಲ್ಲಿದೆ.

New Tanks at Koratagere and Madhugiri Constituency (Construction).

Q.—378. Sri MUDDURAMIAH (Koratagere-Madhugiri).—

Will the Government be pleased to state:—

(*a*) the number of estimates prepared for the construction of new tanks at Koratagere-Madhugiri Constituency with details;

(*b*) what action has been taken on them?

A.—Sri H. M. CHANNABASAPPA (Minister for Industries).—

(*a*) and (*b*) Details are furnished below.—

Taluk	Name of new tank	Area to be benefited	Amount of estimate	Action taken
		Acres	Rs.	
Koratagere ...	New tank at Voddagere.	(1) 127 (2) 36	1,42,000 71,600	These alternative projects are under examination in the Public Works Department.
Koratagere ...	New tank at Hosahalli.	102	1,36,000	This and another alternative project for a lesser capacity are under investigation.
Madhugiri ...	New tank at Thimmanahalli.	301	2,80,000	Under investigation.
Koratagere ...	New tank at Huluvangala.	30	31,000	Under examination.
Madhugiri ...	New tank at Laxmanapalya.	19	13,000	Under scrutiny by the Chief Engineer.

ಶ್ರೀ ಮುದ್ದುರಾಮಯ್ಯ.—ಈ ಪ್ರತಿಯೊಂದು ಕೆರೆಯ ಅಂದಾಜು ತಯಾರಾಗಿ ಎಷ್ಟು ವರ್ಷಗಳಾದವು?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಒಡ್ಡಗೆರೆ ಕೆರೆ ಅಂದಾಜು ತಯಾರಾದ್ದು ಇದರಲ್ಲಿ ಆಲ್ಮರ್ ನೇಟೀವ್ ಪ್ರಪೋಜಲ್ಸ್‌ಗಳಿವೆ, ಮೊದಲನೆಯ ಅಂದಾಜು ತಯಾರಾದ್ದು ಜುಲೈ 1953ರಲ್ಲಿ 2ನೆಯ ಅಂದಾಜು ತಯಾರಾದ್ದು ಮೇ 1955ರಲ್ಲಿ.

ಶ್ರೀ ಮುದ್ದುರಾಮಯ್ಯ.—ಈ ಒಡ್ಡಗೆರೆ ಕೆರೆಯ ಅಂದಾಜು 1944 45ರಲ್ಲೇ ತಯಾರಾಗಿತ್ತು ಎನ್ನುವ ಅಂಶ ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಮುದ್ದುರಾಮಯ್ಯ.—ಈ ಕೆರೆಗಳಿರುವ ಪ್ರದೇಶ ಬಹಳ ಕ್ಷಾಮಪೀಡಿತ ಪ್ರದೇಶ ಎಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಚಾರ ಆಯಾ ವರ್ಷದ ಮಳೆಯನ್ನು ಅವಲಂಬಿಸಿಕೊಂಡು ಹೋಗತಕ್ಕಂಥ ವಿಚಾರ.

ಶ್ರೀ ಮುದ್ದುರಾಮಯ್ಯ.—ರಾಮಮೂರ್ತಿ ಸಮಿತಿಯವರೂ ಕೂಡ ಇದು ಕ್ಷಾಮಪೀಡಿತ ಪ್ರದೇಶವೆಂದು ತೀರ್ಮಾನಿಸಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಚಾರ ನಮ್ಮ ಗಮನಕ್ಕೇನೋ ಬಂದಿದೆ. ಆದರೆ ಅಲ್ಲಿ ಈ ಕೆಲಸಗಳನ್ನು ಕೈಗೊಂಡರೆ ಸರ್ಕಾರಕ್ಕೆ ಇದರಿಂದ ಬರುವ ರಿಟರ್ನ್ 23·4 ಆದ್ದರಿಂದ ಅಲ್ಲಿಯ ರೈತರು ಹೆಚ್ಚು ಕಂದಾಯ, ಕಾಂಟ್ರಿಬ್ಯೂಷನ್ ಕೊಡುವುದಾದರೆ ಮಾಡಬಹುದು. ಈ ವಿಚಾರವಲ್ಲಿ ಈಗಾಗಲೇ ಆ ಶ್ರೀ ನಾಗನಗೌಡರ ನೇತೃತ್ವದಲ್ಲಿ ನೇಮಕ ಮಾಡಲಾಗಿದ್ದ ಸಮಿತಿಯವರು ಒಪ್ಪಿಸಿರುವ ಶಿಫಾರ್ಸುಗಳಿಗೆ ಗಮನ ಕೊಡುವ ಆಲೋಚನೆ ಸರ್ಕಾರಕ್ಕೆ ಇದೆ.

ಶ್ರೀ ಮುದ್ದುರಾಮಯ್ಯ.—ಅಲ್ಲಿಯ ರೈತರು ಈಗ ಎಕರೆ ಒಂದಕ್ಕೆ 500 ರೂಪಾಯಿ ಕಾಂಟ್ರಿಬ್ಯೂಷನ್ ಕೊಡಲು ಮುಂದೆ ಬಂದಿದ್ದಾರೆಂಬ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವರು ಹಾಗೆ ಕೊಡಲು ಒಪ್ಪಿರಬಹುದು. ಆದರೆ ಇನ್ನು ಕೆಲವರು ಒಪ್ಪದೆ ಇರಬಹುದು. ಶೇಕಡ 2 ಪೇಲೆ ರಿಟರ್ನ್ ಬಂದರೆ ಸರ್ಕಾರ ಇದನ್ನು ಪರಿಶೀಲಿಸಬಹುದು.

ಶ್ರೀ ಮುದ್ದುರಾಮಯ್ಯ.—ಈ ಪ್ರದೇಶ ಕ್ಷಾಮ ಪೀಡಿತ ಪ್ರದೇಶವಾದದ್ದರಿಂದ ಇಲ್ಲಿಗೆ ರಿಟರ್ನ್ ಕಡಮೆಯಾದರೂ ತಾವು ಒಂದು ವಿಶೇಷ ರಿಯಾಯಿತಿ ಕೊಟ್ಟು ಸಹಾಯ ಮಾಡಲು ಮನಸ್ಸು ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮ ಪ್ರಶ್ನೆಯನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.

Nagavalli Amani Tank, Tumkur Taluk (Repairs).

Q.—496. Sri T. N. MUDALAGIRI GOWDA (Kunigal).—

Will the Government be pleased to state :—

(*a*) whether the Nagavalli amani tank of Tumkur taluk has developed a leak in its central bund after the last rainy season ;

*Asterisk indicates that the remarks or speeches have not been revised by the Members concerned.